ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.181/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ದುರುಗಮ್ಮ @ ನೇತ್ರಾವತಿ** | | |
| **ತಂದೆಃಹೆಸರು** | **ತಿಪ್ಪಣ್ಣ** | **ಪಿಡಬ್ಲೂಃ** | **1** |
| **ವಯಸ್ಸು** | **32 ವರ್ಷ** | **ಸಿಡಬ್ಲೂಃ** | **1** |
| **ಉದ್ಯೋಗಃ** | **ಗೃಹಿಣಿ** | | |
| **ವಾಸ ಸ್ಥಳಃ** | **ರಾಜೀವ ನಗರ ಕ್ಯಾಂಪ್** | | |

**ದಿನಾಂಕ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಚಾಸಾ-2 ರಿಂದ 8 ರವರ ಪರಿಚಯ ಇದೆ. 1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಮಾವ, 3 ನೆ ಆರೋಪಿ ನನ್ನ ನಾದಿನಿ, 4 ನೇ ಆರೋಪಿ ನನ್ನ ಮೈದುನ.

ದಿ.22-10-2015 ರಂದು ತಾಯಮ್ಮ ಕ್ಯಾಂಪಿನ ಹತ್ತಿರ ಇರುವ ದುರುಗಮ್ಮ ದೇವಿ ಜಾತ್ರೆಯಲ್ಲಿ ನನ್ನ & 1 ನೇ ಆರೋಪಿಯ ವಿವಾಹ ಸಾಮೂಹಿಕ ವಿವಾಹದಲ್ಲಿ ಆಗಿದ್ದು, ನಂತರ 3 ವರ್ಷಗಳ ಕಾಲ ಚೆನ್ನಾಗಿದ್ದೆವು. ನಂತರ 1 ನೇ ಆರೋಪಿ ನನ್ನ ಮೇಲೆ ಸಂಶಯಪಡುವುದು, ಹೊಡೆ ಬಡೆ ಮಾಡುತ್ತಿದ್ದರು. ನಂತರ 1 ನೇ ಆರೋಪಿ ನನಗೆ ಲೇ ಸೂಳೆ ನೀನು ಸರಿಯಿಲ್ಲ, ನಿನ್ನ ನಡತೆ ಸರಿಯಿಲ್ಲ, ನೀನು ತವರಿಗೆ ಹೋದಾಗ ಅವರಂತೆ ಇರುತ್ತೀ ಎಂದೆಲ್ಲಾ ಬೈಯ್ಯುತ್ತಿದ್ದನು. ನನ್ನ ಮಾವ ನನ್ನೊಂದಿಗೆ ಅಸಭ್ಯವಾಗಿ ನಡೆದುಕೊಳ್ಳುತ್ತಿದ್ದರು. ಸದರಿ ವಿಷಯವನ್ನು ನನ್ನ ಗಂಡನಿಗೆ ಹೇಳಿದರೆ, ಆತ ನಂಬುತ್ತಿರಲಿಲ್ಲ. ನನ್ನನ್ನು ಬಾಯಿಗೆ ಬಂದಂತೆ ಬೈದು, ಹೊಡೆದು ಮನೆಯಿಂದ ಹೊರಗೆ ಹಾಕಿದ್ದರು. ನಂತರ ನಾನು ನನ್ನ ತವರು ಮನೆಗೆ ಹೋಗಿದ್ದೆ.

ದಿ.21-07-2019 ರಂದು ಬೆ.11 ಗಂಟೆಗೆ ನಾನು ನನ್ನ ತವರು ಮನೆಯಲ್ಲಿದ್ದಾಗ, ನನ್ನ ಗಂಡ & ಉಳಿದ ಆರೋಪಿತರು ನನ್ನ ತವರು ಮನೆಗೆ ಬಂದು ಲೇ ಸೂಳೆ ನೀನು ಇಲ್ಲಿಯೇ ಮಜಾ

ಮಾಡಿಕೊಂಡು ಇದ್ದೀಯಾ, ನಮಗೆ ಅಡುಗೆ ಮಾಡುವವರು ಯಾರು, ಅಲ್ಲಿಗೆ ಬಂದರೆ ನಿನ್ನನ್ನು ಸಾಯಿಸುತ್ತೇನೆಂದು ಹೊಡೆ ಬಡೆ ಮಾಡಿದರು. ಆಗ ನಾನು ಕಿರುಚುವ ಶಬ್ದ ಕೇಳಿ ನನ್ನ ಅಣ್ಣ, ಚಿಕ್ಕಪ್ಪ, ನನ್ನ ಮಾವ ಬಂದು ನನ್ನನ್ನು ಬಿಡಿಸಿಕೊಂಡರು. ನನ್ನ ಅಣ್ಣಂದಿರು, ಕುಲಸ್ಥರೆಲ್ಲರೂ ಸೇರಿ ಆರೋಪಿತರಿಗೆ ಬುದ್ಧಿ ಹೇಳಿದರು, ಅದನ್ನು ಕೇಳದೇ, ಆರೋಪಿತರು ಆಕೆಯನ್ನು ಕರೆದುಕೊಂಡು ಹೋಗುವುದಿಲ್ಲ, ಆಕೆ ಅಲ್ಲಿಗೆ ಬಂದರೆ ಆಕೆಯನ್ನು ಜೀವಂತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು. ನಂತರ ನನ್ನ ಅಣ್ಣಂದಿರೊಂದಿಗೆ ಮಾತನಾಡಿ ತಡವಾಗಿ ದಿ.06-08-2019 ರಂದು ದೂರು ಕೊಟ್ಟಿದ್ದೆನು. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

ಮರು ದಿನ ಪೋಲೀಸರು ನನ್ನ ತವರು ಮನೆಗೆ ಬಂದು ಬೆ.11 ರಿಂದ 5 ರವರೆಗೆ ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸ್ಥಳದಲ್ಲಿ ಜನ ಸೇರಲು ಸಮಯ ಬೇಕಾಗಿತ್ತು, ಆದ್ದರಿಂದ 5 ಗಂಟೆಯವರೆಗೆ ಪಂಚನಾಮೆ ಮಾಡಿದ್ದರು. ಸಾಕ್ಷಿಯು ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಾನು ನನ್ನ ಮದುವೆ ಕಾರ್ಡ್ & ಫೋಟೋಗಳು ಇಲ್ಲ ಎಂದು ಹೇಳಿ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ**

ನಿಪಿ-2 ನ್ನು ಬೆ.9 ರಿಂದ 10 ಗಂಟೆಯವರೆಗೆ ಮಾಡಿದ್ದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

**ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**